ಇ) ಹದ್ದುಬಸ್ತು ನಿಗದಿಪಡಿಸಲು ನಿಗಧಿತ ಅರ್ಜಿಕೊಟ್ಟ 3 ತಿಂಗಳೊಳಗೆ ಕಡತಗಳ ವಿಲೇ ಮಾಡಲಾಗುವುದು.

ವಿಷಯ: ಎ.ಪಿ.ಎಂ.ಸಿ. ಗ್ರಾಮಾಂತರ ರಸ್ತೆ ನಿರ್ವಹಣೆ.

2687 (2728)

ಶ್ರೀ ಡಿ.ವಿ.ಸದಾನಂಗೌಡ (ಪುತ್ತೂರು): ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸ್ತುತ ಎಪಿಎಂಸಿಯಿಂದ ತೆಗೆದುಕೊಂಡ ಗ್ರಾಮಾಂತರ ರಸ್ತೆಗಳ ನಿರ್ವಹಣೆಗೆ ಸರ್ಕಾರ ಕೈಗೊಂಡಿದೆಯೇ ಮತ್ತು ಈ ಕೆಲಸಕ್ಕೆ ಮೀಸಲಿಟ್ಟಿರುವ ಹಣವೆಷ್ಟು?

ಆ) ಈ ತನಕ ಎಪಿಎಂಸಿಯಿಂದ ಮಾಡಿದ ಖರ್ಚು ಎಷ್ಟು? ಎಷ್ಟು ಕಿ.ಮೀ. ನೂತನರಸ್ತೆ ರಚನೆಯಾಗಿದೆ ಮತ್ತು ಡಾಂಬರೀಕರಣ ಮಾಡಿದ ರಸ್ತೆ ಎಷ್ಟು?

ಇ) ಪುತ್ತೂರಿನ ಮಾರುಕಟ್ಟೆಯನ್ನು ಎಪಿಎಂಸಿ ಯಾರ್ಡ್‌ಗೆ ಯಾವಾಗ ಸ್ಥಳಾಂತರಿಸಲಾಗುವುದು? ಈತನಕ ಸ್ಥಳಾಂತರಿಸದಿರುವ ಕಾರಣವೇನು?

ಶ್ರೀ ಹೆಚ್.ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):

ಅ) ಹೌದು. ಸರ್ಕಾರವು ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ 50 ಕಿ.ಮೀ. ಉದ್ದದ ಸಂಪರ್ಕ ರಸ್ತೆಗಳನ್ನು ಮುಂದಿನ 5 ವರ್ಷಗಳಲ್ಲಿ ಪೂರ್ಣಗೊಳಿಸಲು ಆದೇಶಿಸಿದೆ. ಪ್ರತಿ ವಿಧಾನಸಭಾಕ್ಷೇತ್ರದಲ್ಲಿ ರೂ. 15.00 ಲಕ್ಷಗಳ ವೆಚ್ಚದಲ್ಲಿ ಮಾರುಕಟ್ಟೆ ಸಮಿತಿಯ ನಿಧಿಯಿಂದ ಸಂಪರ್ಕ ರಸ್ತೆಗಳನ್ನು ಅಭಿವೃದ್ಧಿಗೊಳಿಸಲು ನಿಗದಿಪಡಿಸಲಾಗಿದೆ.

ಆ) 1995-96ರಲ್ಲಿ ಇಲ್ಲಿಯ ತನಕ ರೂ. 2242.95 ಲಕ್ಷದ ಮೊತ್ತದ ಖರ್ಚು ಮಾಡಲಾಗಿದೆ. 1995-96ರಲ್ಲಿ ಒಟ್ಟಾರೆ 1,836.14 ಕಿ.ಮೀ ಉದ್ದ ಅಭಿವೃದ್ಧಿಗಾಗಿ ಕೈಗೊಳ್ಳಲಾಗಿದೆ. ಇದರಲ್ಲಿ ಒಟ್ಟಾರೆ 554.00 ಕಿ.ಮೀ. ಉದ್ದದ ರಸ್ತೆಗಳ ಡಾಂಬರೀಕರಣಕ್ಕಾಗಿ ಕೈಗೊಳ್ಳಲಾಗಿದೆ.

ಇ) ಪುತ್ತೂರು ಮಾರುಕಟ್ಟೆ ಪ್ರಾಂಗಣಕ್ಕೆ 1997ರ ಆಗಸ್ಟ್ ತಿಂಗಳ ಕೊನೆಯಲ್ಲಿ ವಹಿವಾಟನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುವುದು. ಪೇಟೆ ಕಾರ್ಯಾಕರ್ತರಿಗೆ (ವರ್ತಕರಿಗೆ) ಗೋದಾಮುಗಳ ಸೌಲಭ್ಯ ಒದಗಿಸಬೇಕಾಗಿದ್ದುದರಿಂದ ವ್ಯಾಪಾರ ಸ್ಥಳಾಂತರವು ವಿಳಂಬವಾಗಿರುತ್ತದೆ.

ವಿಷಯ: ಪುತ್ತೂರು ತಾಲ್ಲೂಕಿನಲ್ಲಿ ಸ್ಮಶಾನಕ್ಕಾಗಿ ಭೂಮಂಜೂರಾತಿ.

2688 (4051)

ಶ್ರೀ ಡಿ.ವಿ.ಸದಾನಂದ ಗೌಡರು (ಪುತ್ತೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಪುತ್ತೂರು ತಾಲ್ಲೂಕಿನ ಎಷ್ಟು ಗ್ರಾಮಗಳಲ್ಲಿ ಸ್ಮಶಾನಕ್ಕೆ ಕಂದಾಯ ಇಲಾಖೆಯಿಂದ ಜಮೀನು ನೀಡಲಾಗಿದೆ

2) ಸ್ಮಶಾನದ ಬಗ್ಗೆ ಜಮೀನನ್ನು ಕಾಯ್ದಿರಿಸಿದ ಗ್ರಾಮಗಳ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು)

1 ಮತ್ತು 2) 55 ಗ್ರಾಮಗಳಲ್ಲಿ 110-80 ಎಕರೆ ಜಮೀನನ್ನು ಸ್ಮಶಾನಕ್ಕಾಗಿ ಕಾಯ್ದಿರಿಸಲಾಗಿದೆ.

ವಿಷಯ: ಮೈಲುತುತ್ತದ ಸರಬರಾಜಿನ ಬಗ್ಗೆ

2690 (2645)

ಶ್ರೀ ಶಿವಾನಂದನಾಯ್ಕ (ಭಟ್ಕಳ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಅಡಕೆ ಬೆಳೆಗೆ ನೀಡುತ್ತಿದ್ದ ಮೈಲುತುತ್ತವನ್ನು ಈ ವರ್ಷದಿಂದ ನಿಲ್ಲಿಸಲು ಕಾರಣವೇನು?

2) ಸಬ್ಸಿಡಿಯನ್ನು ಕೇಂದ್ರ ಸರ್ಕಾರವು ನಿಲ್ಲಿಸಿದರೆ ರಾಜ್ಯ ಸರ್ಕಾರವು ಸಬ್ಸಿಡಿಯನ್ನು ನೀಡಲು ಉದ್ದೇಶಿಸಿದೆಯೇ?

ಶ್ರೀ ಡಿ.ಟಿ.ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು)

1996-97 ಅಡಿಕೆ ಅಭಿವೃದ್ಧಿ ಯೋಜನೆಯನ್ನು ಕೇಂದ್ರ ಸರ್ಕಾರದ ಅನುದಾನದಡಿ ಅನುಷ್ಠಾನಗೊಳಿಸಿರುತ್ತದೆ. ಈ ಯೋಜನೆಯಡಿ ರಿಯಾಯಿತಿ ದರದಲ್ಲಿ ಮೈಲುತುತ್ತು ನೀಡುವ ಕಾರ್ಯಕ್ರಮವಿತ್ತು. 1997-98ನೇ ಸಾಲಿನಿಂದ ಈ ಯೋಜನೆಯನ್ನು ರಾಜ್ಯ ಸರ್ಕಾರಕ್ಕೆ ವರ್ಗಾಯಿಸಿದೆ ಎಂದು ದಿನಾಂಕ: 02-06-97 ಕೇಂದ್ರ ಸರ್ಕಾರದ ಪತ್ರ ಬಂದ ಪ್ರಯುಕ್ತ ಸ್ಥಗಿತಗೊಳಿಸಲಾಗಿದೆ.

2) 1997-98ನೇ ಸಾಲಿಗೆ ಈ ಯೋಜನೆಯನ್ನು ರಾಜ್ಯ ವಲಯ ಯೋಜನೆಯಾಗಿ